**Government of Karnataka**
**Deposition Shet (R.P.N.57) Form 4 Criminal**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 104/2018 |

ದಿನಾಂಕ 01-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 6 ಪ್ರಾಸಾಃ 4

| | |
|---|---|
| ಹೆಸರು | ಡಾ: ಅಲ್ಲಾಭಕ್ಷ |
| ತಂದೆಯ ಹೆಸರು | ಮಹಿಬೂಬಅಲಿ |
| ವಯಸ್ಸು | 38 ವರ್ಷ |
| ಉದ್ಯೋಗ | ವೈದ್ಯಾಧಿಕಾರಿಗಳು ರೀಮ್ಸ್ ಆಸ್ಪತ್ರೆ ರಾಯಚೂರು |
| ವಾಸಸ್ಥಳ | ರಾಯಚೂರು |

**ಮುಖ್ಯ ವಿಚಾರಣೆಃ ಸ ಸ ಅ ರವರಿಂದಃ**

ನಾನು 2016 ರಿಂದ ಇಲ್ಲಿಯವರೆಗೆ ರಾಯಚೂರು ರೀಮ್ಸ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 07-01-2017 ರಂದು ಮಧ್ಯಾಹ್ನ 12-51 ಗಂಟೆಗೆ ಚಾಸಾ-4 ಇವರು ಅವರ ಪತ್ನಿ ರಮಜಾನಬೀ ಇವರೊಂದಿಗೆ ಆಸ್ಪತ್ರೆಗೆ ಹೊಡದಾಟದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದರು. ಚಾಸಾ-4 ರವರನ್ನು ಪರೀಕ್ಷಿಸಿದಾಗ ಅವರಿಗೆ ಈ ಕೆಳಗಿನ ಗಾಯಗಳು ಆಗಿರುವುದು ಕಂಡು ಬಂದಿರುತ್ತವೆ.

1. CLW 1x1 cm over parietal region which was sutured.
2. City brain plain normal study

ಸದರಿ ಗಾಯವು ಸಾದಾ ಸ್ವರೂಪದ ಗಾಯವಾಗಿರುತ್ತದೆ. ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 3 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು. ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಕಲ್ಲಿನಿಂದ ತಲೆಗೆ ಹಲ್ಲೆ ಮಾಡಿದರೆ ಇಂತಹ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

**ವಾಟೀ ಸವಾಲು : ಆರೋಪಿತರ ಪರ ಶ್ರೀ ಪಿ ಟಿ ಎನ್ ವಕೀಲರಿಂದ : -**

1. ಆಸ್ಪತ್ರೆಗೆ ಗಾಯಾಳುವಿನ ಜೊತೆಗೆ ಆತನ ಹೆಂಡತಿ ಒಬ್ಬರೆ ಬಂದಿದ್ದರು ಬೇರೆ ಯಾರು ಬಂದಿರಲಿಲ್ಲ. ಗಾಯಾಳುವಿಗೆ ಗಾಯಾಗಳು ದಿನಾಂಕ: 05-01-2017 ರಂದು ಆಗಿದ್ದು ಅವರು ಆಸ್ಪತ್ರೆಗೆ ದಿನಾಂಕ: 07-01-2017 ರಂದು ದಾಖಲಾಗಿದ್ದು, ನಿ ಪಿ 3 ಗಾಯದ ಪ್ರಮಾಣ ಪತ್ರದಲ್ಲಿ ಗಾಯದ ವಯಸ್ಸು ನಮೂದು ಮಾಡಿರುವುದಿಲ್ಲ. 24 ಗಂಟೆ ಅವಧಿ ಮುಗಿದ ನಂತರ ಗಾಯವು ಹೇಗೆ ಆಗಿರುತ್ತದೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-4 ರವರು ಮೊದಲೇ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆಯನ್ನು ಪಡೆದುಕೊಂಡು ನಂತರ ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಗಾಯಾಳುವನ್ನು ಆಸ್ಪತ್ರೆಗೆ ರೆಫರ್ ಮಾಡಿದ ದಾಖಲೆ ಇರುವುದಿಲ್ಲ. ಗಾಯಾಳುವನ್ನು ವಿಚಾರ ಮಾಡಿದಾಗ ಅವರು ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಬಂದಿರುತ್ತೇವೆಂದು ತಿಳಿಸಿರುತ್ತಾರೆ.

2. ಗಾಯಾಳುವಿನ ಮೆದುಳಿನ ಸಿಟಿ ಸ್ಕ್ಯಾಯನ್ ನಾನೇ ಮಾಡಿರುತ್ತೇನೆ. ತಲೆಗೆ ಸಿಟಿ ಸ್ಕ್ಯಾಯನ್ ಮಾಡಬೇಕಾದರೆ ವೈದ್ಯರ ಶಿಫಾರಸ್ಸು ಬೇಕಾಗುತ್ತದೆ ಎಂದರೆ ಸಾಕ್ಷಿಯು ಗಾಯಳುವಿಗೆ ಚಕ್ರ ಬರುತ್ತಿದೆ ಎಂದು ಹೇಳಿದ್ದರಿಂದ ಅವರಿಗೆ ಸಿಟಿ ಸ್ಕ್ಯಾಯನ್ ಮಾಡಿರುತ್ತೇನೆ. ನಾನು ಗಾಯಾಳುವಿಗೆ ತಪಾಸಣೆ ಮಾಡಿರುತ್ತೇನೆ. ನಾನು ಮೆದುಳುರೋಗ ತಜ್ಞ ವೈದ್ಯನಾಗಿರುವುದಿಲ್ಲ ಆದರೆ ನಾನು ತುರ್ತು ಚಿಕಿತ್ಸೆ ವೈದ್ಯನಾಗಿರುತ್ತೇನೆ. ಚಾಸಾ-4 ರವರ ತಲೆಗೆ ಆಗಿರುವ ಗಾಯಕ್ಕೆ ಎಷ್ಟು ಹೊಲಿಗೆಗಳು ಹಾಕಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಮೇಲಿನಿಂದ ಕೆಳಗೆ ಗಟ್ಟಿಯಾದ ವಸ್ತುಇವಿನ ಮೇಲೆ ಬಿದ್ದರೆ ಇಂತಹ ಗಾಯಾಗಳು ಆಗುವ ಸಾದ್ಯತೆ ಇರುತ್ತದೆ. ದಿನಾಂಕ: 07-01-2017 ರಂದು ಮಧ್ಯಾಹ್ನ 12-51 ಗಂಟೆಗೆ ಚಾಸಾ-4 ರವರು ಆಸ್ಪತ್ರೆಗೆ ಬಂದಿದ್ದರು ಅವರನ್ನು ತಪಾಸಣೆ ಮಾಡಿರುತ್ತೇನೆಂದು ಗಾಯಗಳು ಆಗಗಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿ ಪಿ 3 ಗಾಯದ ಪ್ರಮಾಣಪತ್ರ ಸೃಷ್ಟಿ ಮಾಡಿ ನೀಡಿದ್ದೀರಿ ಎಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿ ದೂರುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿರುವ ಹೇಳಿರುವ ವಿಷಯಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಪ್ರ.ದ.ನ್ಯಾ.ದಂ.ಗಳು, ದೇವದುರ್ಗ.